**ತಾಸೀಲ್ದಾರ್ರು, ಆಸಾದಿಯನ್ನು ಕರೆದು, 'ನೋಡಪ್ಪ, ಇನ್ನು ಮುಂದೆ ಮುಜರಾಯಿ ದೇವಸ್ಥಾನದ ಎದುರಿಗೆ ಆಶ್ಲೀಲ ಪದಗಳನ್ನು ಹಾಡುವಂತಿಲ್ಲ. ಹಂಗೇನಾದರೂ ಹಾಡಿದರೆ ಕಾನೂನುಕ್ರಮ ತಗೋಬೇಕಾಗುತ್ತೆ ಹುಷಾರ್' ಎಂದು ಎಚ್ಚರಿಸಿದರು. ಆಕಾಶವೇ ತಲೆಯ ಮೇಲೆ ಕವುಚಿದಂಗಾಗಿ ಅಲ್ಲೇ ಕುಸಿದು ಕುಂತ ಹನುಮಂತಣ್ಣ...**

ಕಾರ್ಯಕ್ರಮಗಳನ್ನು ನಡೆಸಿಕೊಡುವರೆಂದೂ ಸಮಸ್ತ ಭಕ್ತಾದಿಗಳು ಜಾತ್ರಾ ಮಹೋತ್ಸವದ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಅಮ್ಮನವರ ಕೃಪಾಶೀರ್ವಾದಗಳನ್ನು ಪಡೆದು ಕೊಳ್ಳಬೇಕೆಂದು ಹೇಳುತ್ತಿದ್ದುದನ್ನು ಕೇಳಿಸಿಕೊಂಡ ಹನುಮಂತಣ್ಣ ಆವಾಗ ಹೊಸ ಬಂಡುಪದಗಳನ್ನು ಹಾಡಿ ಅವರನ್ನು ಮೆಚ್ಚಿಸಬೇಕೆಂದುಕೊಂಡು ಕಾಯುತ್ತ ನಿಂತಲ್ಲೆ ನಿಂತುಕಂಡನು.

ಹನ್ನೆಲ್ಡೂವರಿಗೆ ಸರಿಯಾಗಿ ಶಾಸಕರಾದ ಕದುರಯ್ಯನವರು ತಮ್ಮ ಪತ್ನಿ ಮಾಳಮ್ಮನವರ ಸಮೇತ ದಡೂತಿ ಕಾರಿನಿಂದ ಕೆಳಗಿಳಿದರು. ಕದುರಪ್ಪನವರು ರೇಷ್ಮೆ ಪಂಚೆ ಉಟುಗಂಡು ಮೇಲೆ ರೇಷ್ಮೆ ಧೋತರ ಹೊದ್ದುಕೊಂಡಿದ್ದರು. ಅಂಗಿ ಹಾಕಿಕೊಂಡಿರಲಿಲ್ಲ. ಹಣೆಗೆ ಹುಬ್ಬಿನಿಂದ ಸೀದಾ ಮೂರು ಇಂಚು ಉದ್ದ ಕುಂಕುಮ ಇಟ್ಟುಕೊಂಡು ಶ್ರದ್ಧಾಭಕ್ತಿಗಳನ್ನು ನಟಿಸುತ್ತ ಮುಂದೆ ಬಂದರು. ಅವರ ಹೆಂಡತಿ ಮಾಳಮ್ಮನವರು ಉಟ್ಟಿದ್ದ ಭಾರಿ ರೇಷ್ಮೆ ಸೀರೆ ಸುತ್ತ ಇದ್ದ ಕರೆಂಟಿನ ಬೆಳಕಿಗೆ ಥಳಗುಟ್ಟುತ್ತಿತ್ತು. ದೊಡ್ಡ ಪದಕದ ಸರ ಸೀರೆಯ ಮೇಲಾಸಿ ಬಂದು ಅವರ ಎದೆಯನ್ನು ಆವರಿಸಿತ್ತು. ಅವರನ್ನೇ ಕಾಯುತ್ತ ನಿಂತಿದ್ದ ಗುಡಿಗೌಡ, ಪೂಜಾರ್ರು, ಯಜಮಾನ್ರು ಎಲ್ಲಾರ್ನು ಪಕ್ಕಕ್ಕೆ ಸರಿಸಿ ಎಂತೆಂಥದೋ ಕಳಸಗಳಿಗೆ ಇಳ್ಳೇದೆಲೆ ಸಿಕ್ಕಿಸಿಕೊಂಡು ತಟ್ಟೇಲಿಟ್ಟುಕಂಡು ಕಾಯುತ್ತಿದ್ದ ಬ್ರಾಹ್ಮಣರು ಮಂತ್ರಗಳನ್ನು ಹೇಳುತ್ತ ಶಾಸಕರು ಮತ್ತು ಅವರ ಹೆಂಡತಿಯ ಮೇಲೆ ಅಕ್ಕಿ ಕಾಳು ಹಾಕಿ ಸ್ವಾಗತ ಕೋರಿದರು. ಡೋಲು ನಾಗಸ್ವರದವರು ರಣಮೋಜಿನಿಂದ ಬಾರಿಸಿ ಸಂಭ್ರಮವನ್ನು ತೋರಿಸಿದರು. ದೇವರಗುಡಿ ಒಳಗೆ ಹೋಗಿ ಬಂದ ಶಾಸಕರು ಮತ್ತು ಅವರ ಹೆಂಡತಿಯನ್ನು ಯಜ್ಞಕುಂಡದ ಮುಂದೆ ಕೂರಿಸಿಕೊಂಡು ಉರಿಯುತ್ತಿದ್ದ ಬೆಂಕಿಗೆ ಏನೇನನ್ನೋ ಹಾಕಿಸುತ್ತಿದ್ದರು. ಅವರು ಹೇಳಿಕೊಟ್ಟದ್ದನ್ನು ಹೇಳುತ್ತ, ಇಂಥದ್ದು ಮಾಡಿ ಅಂದ್ರೆ ಅದನ್ನು ಮಾಡುತ್ತ ಶಾಸಕರು ಧನ್ಯತೆಯನ್ನು ಅನುಭವಿಸುತ್ತಿದ್ದರು. ಇನ್ನು ಮಾಳಮ್ಮನವರನ್ನಾದರೋ ಯಾಗ ಮಾಡುತ್ತಿದ್ದವರು ತಮ್ಮ ನಡುವೆ ಪ್ರತಿಷ್ಠಾಪನೆ ಮಾಡಿಕೊಂಡಿದ್ದರು. ಆಗಾಗ್ಗೆ ಅವರ ಕೈಲಿ ಯಾವ್ಯಾವುದೋ ವಸ್ತುವಿಶೇಷಗಳನ್ನು ಕೊಟ್ಟು ಅದನ್ನು ಬೆಂಕಿಗೆ ಹಾಕಲು ಹೇಳುತ್ತಿದ್ದರು. ಮಾಳಮ್ಮನವರು ಅವರು ಹೇಳಿದಾಗ ಅದನ್ನು ಎಸೆಯುತ್ತಿದ್ದರು. ಇದೆಲ್ಲ ಸುಮಾರು ಹೊತ್ತು ನಡೆದು ಇನ್ನೇನು ಶಾಸಕರು ಈಗ ಸಮಸ್ತ ಭಕ್ತಾದಿಗಳನ್ನು ಉದ್ದೇಶಿಸಿ ಮಾತನಾಡುತ್ತಾರೆಂದೂ ಎಲ್ಲರೂ ತಮ್ಮ ತಮ್ಮ ಜಾಗಗಳಲ್ಲಿ ಆಸೀನರಾಗಿ ದೇವಿಯ ಕೃಪಾಶೀರ್ವಾದಗಳಿಗೆ ಪಾತ್ರರಾಗಬೇಕೆಂದು ಲೌಡ್ ಸ್ಪೀಕರು ಹೇಳಿತು. ನಂತರ ಶಾಸಕರು ತಾವು ಉಟ್ಟಿದ್ದ ಆ ಫ್ಯಾನ್ಸಿ ಡ್ರೆಸ್ಸಿನಲ್ಲಿ ಭಕ್ತಾದಿಗಳನ್ನು ಉದ್ದೇಶಿಸಿ ಮಾತನಾಡಿದರು. ಅವರು ಅಮ್ಮನವರ ದೇವಸ್ಥಾನ ಕಟ್ಟಲು ಶಾಸಕರ ನಿಧಿಯಿಂದ ಐವತ್ತು ಲಕ್ಷ ರೂಪಾಯಿಗಳನ್ನು ನಿಂತ ನಿಲುವಿನಲ್ಲಿಯೇ ಕೊಡುತ್ತಿರುವುದಾಗಿಯೂ, ಇದು ಸರ್ಕಾರಕ್ಕೆ ಸೇರಿರುವ ಮುಜರಾಯಿ ದೇವಸ್ಥಾನವಾಗಿರುವುದರಿಂದ ಇನ್ನು ಮೇಲೆ ಎಲ್ಲವನ್ನೂ ಶಾಸ್ತ್ರೋಕ್ತವಾಗಿ